## ಕರ್ನಾಟಕ ಸರ್ಕಾರ

## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

**ಮಲ್ಲೇಶ್ವರಂ 6ನೇ ಅಡ್ಡರಸ್ತೆ, ಬೆಂಗಳೂರು-560003**

ಸಂಖ್ಯೆ:ಆರ್6/ರಂ.ಶಿ./ರಂ.ಪ್ರ./ಚ.ಚಿ.ಡಿ./04/2020-21 ದಿನಾಂಕ: 18/12/2020

## <u>ಸುತ್ತೋಲೆ</u>

**<u>ವಿಷಯ:</u>** ನವೆಂಬರ್-2020ರಲ್ಲಿ ನಡೆದ ಚಲನಚಿತ್ರ ನಟನೆ, ಡಿಪ್ಲೊಮಾ ಇನ್ ಡ್ರಾಮಾ ಆರ್ಟ್ಸ್ ಹಾಗೂ ಡಿಪ್ಲೊಮಾ ಇನ್ ಥಿಯೇಟರ್ ಆರ್ಟ್ಸ್ ಕೋರ್ಸ್‌ಗಳ ಪರೀಕ್ಷೆಗಳ ಫಲಿತಾಂಶ ಪ್ರಕಟಣೆ ಕುರಿತು.

*******

ನವೆಂಬರ್ 2020ರ ಮಾಹೆಯಲ್ಲಿ ನಡೆದ ಚಲನಚಿತ್ರ ನಟನೆ, ಡಿಪ್ಲೊಮಾ ಇನ್ ಡ್ರಾಮಾ ಆರ್ಟ್ಸ್ ಹಾಗೂ ಡಿಪ್ಲೊಮಾ ಇನ್ ಥಿಯೇಟರ್ ಆರ್ಟ್ಸ್ ಕೋರ್ಸ್‌ಗಳ ಪರೀಕ್ಷೆಯ ಫಲಿತಾಂಶವನ್ನು ದಿನಾಂಕ: 22/12/2020 ರಂದು ಮಧ್ಯಾಹ್ನ 3.00 ಗಂಟೆಗೆ ಮಂಡಳಿಯ ಅಂತರ್ಜಾಲ **<u>www.kseeb.kar.nic.in</u>** ನಲ್ಲಿ ಪ್ರಕಟಿಸಲಾಗುವುದು. ಸದರಿ ಫಲಿತಾಂಶವನ್ನು ನಿಮ್ಮ ಸಂಸ್ಥೆ/ಕಾಲೇಜುಗಳ ಲಾಗಿನ್‌ಗೆ ಅಳವಡಿಸಿದ್ದು, ಅದರಂತೆ ನೀವು ಲಾಗಿನ್ ಆಗಿ ಫಲಿತಾಂಶವನ್ನು ಡೌನ್‌ಲೋಡ್ ಮಾಡಿಕೊಂಡು ಕಾಲೇಜುಗಳ ಸೂಚನಾ ಫಲಕದಲ್ಲಿ ದಿನಾಂಕ: 23/12/2020 ರಂದು ಬೆಳಿಗ್ಗೆ 11.30 ಗಂಟೆಗೆ ಫಲಿತಾಂಶ ಪ್ರಕಟಿಸಲು ತಿಳಿಸಿದೆ. ಫಲಿತಾಂಶ ಪ್ರಕಟಣೆಯಾದ 30 ದಿನಗಳೊಳಗೆ ಫಲಿತಾಂಶ ತಿದ್ದುಪಡಿ ಇದ್ದಲ್ಲಿ ನಿಯಮಾನುಸಾರ ತಿದ್ದುಪಡಿ ಮಾಡಲಾಗುವುದು. ವಿಶೇಷ ಪರಿಸ್ಥಿತಿಯಲ್ಲಿ ಅಂದರೆ ಪರೀಕ್ಷೆಯ ದುರಾಚರಣೆ, ವಂಚನೆ, ಅನುಚಿತ ವರ್ತನೆ ಮೊದಲಾದವುಗಳಿಂದ ಪ್ರಭಾವಿತವಾಗಿದೆ ಎಂದು ಕಂಡುಬಂದಲ್ಲಿ ಅಂತಹ ಫಲಿತಾಂಶವನ್ನು ಫಲಿತಾಂಶ ಪ್ರಕಟವಾದ ನಂತರವೂ ನಿಯಮಾನುಸಾರ ಪರೀಕ್ಷಾ ಫಲಿತಾಂಶವನ್ನು ತಡೆಹಿಡಿಯುವ, ರದ್ದುಪಡಿಸುವ, ಮಾರ್ಪಡಿಸಿ ಪ್ರಕಟಿಸುವ ಅಧಿಕಾರವನ್ನು ಮಂಡಳಿ ಹೊಂದಿರುತ್ತದೆ.

ಈ ಕೆಳಕಂಡ ಅಂಶಗಳ ಆಧಾರದ ಮೇಲೆ ನಿಮ್ಮ ಸಂಸ್ಥೆಯ ಎಲ್ಲಾ ಅಭ್ಯರ್ಥಿಗಳ ಫಲಿತಾಂಶವನ್ನು ಮತ್ತು ಇತರೆ ಅಂಶಗಳನ್ನು ಕಡ್ಡಾಯವಾಗಿ ಪರಿಶೀಲಿಸಲು ತಿಳಿಸಿದೆ.

- ನವೆಂಬರ್ 2020ರ ಚಲನಚಿತ್ರ ನಟನೆ, ಡಿಪ್ಲೊಮಾ ಇನ್ ಡ್ರಾಮಾ ಆರ್ಟ್ಸ್ ಹಾಗೂ ಡಿಪ್ಲೊಮಾ ಇನ್ ಥಿಯೇಟರ್ ಆರ್ಟ್ಸ್ ಪರೀಕ್ಷೆ ಬರೆದ ಎಲ್ಲಾ ವಿದ್ಯಾರ್ಥಿಗಳ ಫಲಿತಾಂಶ ಬಂದಿದೆಯೇ? ಎಂಬುದನ್ನು ಪರಿಶೀಲಿಸಿಕೊಳ್ಳುವುದು.

- ಒಂದು ವೇಳೆ ಯಾವುದಾದರೂ ವಿದ್ಯಾರ್ಥಿಗಳ ಫಲಿತಾಂಶ ಬಾರದಿದ್ದಲ್ಲಿ, ಫಲಿತಾಂಶ ತಡೆಹಿಡಿದಿದ್ದಲ್ಲಿ, ಫಲಿತಾಂಶ ಪ್ರಕಟಿಸಿದ 10 ದಿನಗಳೊಳಗಾಗಿ ಸಕಾರಣಗಳೊಂದಿಗೆ ಮಂಡಳಿಗೆ ಪತ್ರ ಬರೆದು ಫಲಿತಾಂಶ ಪಡೆದುಕೊಳ್ಳಲು ತಿಳಿಸಿದೆ. ನಂತರ ಈ ಬಗ್ಗೆ ಯಾವುದೇ ಕೋರಿಕೆ ಬಂದಲ್ಲಿ ಅದನ್ನು ಸ್ವೀಕರಿಸಲಾಗುವುದಿಲ್ಲ. ಮುಂದಿನ ಆಗುಹೋಗುಗಳಿಗೆ ಸಂಸ್ಥೆಯ ಮುಖ್ಯಸ್ಥರೇ ಜವಾಬ್ದಾರರಾಗಿರುತ್ತಾರೆ.

➢ ವಿದ್ಯಾರ್ಥಿಯ ಹೆಸರು, ತಂದೆಯ ಹೆಸರು, ಜನ್ಮ ದಿನಾಂಕ ಇತ್ಯಾದಿ ಸಣ್ಣಪುಟ್ಟ ತಿದ್ದುಪಡಿಗಳಿದ್ದಲ್ಲಿ ಪ್ರಸ್ತಾವನೆಯನ್ನು ಪೂರಕ ದೃಢೀಕೃತ ದಾಖಲೆಗಳೊಂದಿಗೆ (ಕಡ್ಡಾಯವಾಗಿ ಎಸ್.ಎಸ್.ಎಲ್.ಸಿ ದೃಢೀಕೃತ ಅಂಕಪಟ್ಟಿ) **ರೂ.200/- ದಂಡಶುಲ್ಕವನ್ನು** ಇತರೆ ಪರೀಕ್ಷೆಗಳ Neft Challan ಮೂಲಕ ಪಾವತಿಸಿ ಮಂಡಳಿಗೆ ಸಲ್ಲಿಸುವುದು.

➢ ಪ್ರಕಟಿಸಿದ ಫಲಿತಾಂಶ ತಾತ್ಕಾಲಿಕವಾಗಿದ್ದು, ವಿದ್ಯಾರ್ಥಿಗೆ ಮಂಡಳಿಯಿಂದ ನೀಡುವ ಅಂಕಪಟ್ಟಿಯು ಆಯಾ ವಿದ್ಯಾರ್ಥಿಯ ನೈಜ ಫಲಿತಾಂಶವನ್ನು ತಿಳಿಸುತ್ತದೆ. ಅಂದರೆ ಅಂಕಪಟ್ಟಿಯಲ್ಲಿ ನೀಡಿದ ದತ್ತಾಂಶಗಳೇ ಅಂತಿಮ ಎಂದು ಭಾವಿಸತಕ್ಕದ್ದು.

ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಈ ಸುತ್ತೋಲೆಯ ಜೆರಾಕ್ಸ್ ಪ್ರತಿಯನ್ನು ಮತ್ತು ಪರೀಕ್ಷಾ ಫಲಿತಾಂಶ ಪಟ್ಟಿಯನ್ನು ಸಕಾಲದಲ್ಲಿ ಸಂಬಂಧಿಸಿದ ಸಂಸ್ಥೆಗಳ ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಿದೆ.

22/12/2020

(ಎಸ್. ಗೀತಾ)
ನಿರ್ದೇಶಕರು
ಇತರೆ ಪರೀಕ್ಷೆಗಳು
18/12

**ಇವರಿಗೆ,**
ಸಂಬಂಧಿಸಿದ ಸಂಸ್ಥೆಗಳ ಪ್ರಾಂಶುಪಾಲರಿಗೆ ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು:**
1. ಸಂಬಂಧಿಸಿದ ಡಯಟ್ ಪ್ರಾಂಶುಪಾಲರಿಗೆ.
2. ಕಛೇರಿ ಪ್ರತಿ